ಅರಿಸಿನ ಕುಟ್ಟುವ ಶಾಸ್ತ್ರವಿರುತ್ತದೆ. ಐದು ಜನ ಮುತ್ತೈದೆಯರು ಹಾಗೂ ಕಲಶಗಿತ್ತಿ ಒರಳುಕಲ್ಲಿಗೆ ಕುಂಕುಮ, ಅರಿಸಿನ ಹಚ್ಚಿ, ಗೆಜ್ಜೆವಸ್ತ್ರವನ್ನು ಏರಿಸಿದ ಅನಂತರ ಅರಿಸಿನದ ಬೇರನ್ನು ಒರಳಿನಲ್ಲಿ ಹಾಕಿ ಒನಕೆಯಿಂದ ಅದನ್ನು ಕುಟ್ಟುತ್ತಾ ಹಾಡು ಹೇಳುತ್ತಾರೆ. ಕುಟ್ಟಿದ ಅರಿಸಿನವನ್ನು ನೀರಿನೊಂದಿಗೆ ಕಲೆಸಿ ಅದನ್ನು ವಧು–ವರರಿಗೆ ಹಚ್ಚುತ್ತಾರೆ. ಇದಲ್ಲದೆ ವಧು ಹಾಗೂ ಆಕೆಯ ಮನೆಯ ಹೆಂಗಳೆಯರು ಹಾಡುತ್ತಾ(ಬೀಸಾಕ ಕುಂತೇನ ಬಿಳಿಜ್ವಾಳ ಗೆಳತ್ಯವ್ವ / ಬೀಜಕ್ಕಿಟ್ಟೇನೆ ಬಿಳಿಜ್ವಾಳಾ/ ಸುವ್ವಿ ಸುವ್ವಿ ಸುವ್ವಾಲೆ/ಕುಟ್ಟಾಕ ಕುಂತೇನ ಗೋಧೀಯ ಗೆಳತ್ಯವ್ವ / ಬಿತ್ತಾಕಿತ್ತೇನೆ ಗೋಧೀಯ/ ಸುವ್ವಿ ಸುವ್ವಿ ಸುವ್ವಾಲೆ...) ಅಕ್ಕಿ, ಗೋಧಿ, ಜೋಳ ಮುಂತಾದ ಧಾನ್ಯಗಳನ್ನು ಬೀಸೋಕಲ್ಲಿನಲ್ಲಿ ಬೀಸುವ, ಒರಳುಕಲ್ಲಿನಲ್ಲಿ ಕುಟ್ಟುವ ಸಂಭ್ರಮದ ಶಾಸ್ತ್ರವೂ ಇರುತ್ತದೆ.

'ಕೊಟ್ಟಿದ್ದನ್ನು ಅಗೀತದೆ, ಸಿಟ್ಟು ಬಂದು ಉಗೀತದೆ' ಎನ್ನುವ ಒಗಟಿಗೆ 'ಒರಳುಕಲ್ಲು' ಎನ್ನುವುದು ಉತ್ತರ. ಆದರೆ, ನನ್ನ ಅಭಿಪ್ರಾಯದಂತೆ ಈ ಒರಳುಕಲ್ಲು ಭೂತಾಯಿ ಇದ್ದಹಾಗೆ. ಸಿಹಿಯಾಗಲಿ, ಖಾರವಾಗಲಿ, ಒಣ ಪದಾರ್ಥವಾಗಲಿ, ಹಸಿ ಪದಾರ್ಥವಾಗಲಿ, ನಾವೇನೇ ಹಾಕಿ ರುಬ್ಬಿದರೂ ಕೊನೆಗೆ ರುಚಿಯಾದ ಪದಾರ್ಥವೇ ಸಿಗುತ್ತದೆ. ಈ ತಾಯಿಗೆ ಬೀಸೋಕಲ್ಲು, ಕುಟ್ಟಾಣಿ/ಕಲ್ಬತ್ತು ಅನ್ನೋ ಹೆಣ್ಣುಮಕ್ಕಳಿದ್ದಾರೆ. ಏಲಕ್ಕಿ, ಅಡಕೆ, ಮಾತ್ರೆ ಇವುಗಳನ್ನು ನುಣ್ಣಗೆ ಕುಟ್ಟಲು ಸಾಧಾರಣ ಕಲ್ಲಿನ ಅಥವಾ ಅಮೃತಶಿಲೆಯ ಕುಟ್ಟಾಣಿಯನ್ನು ಬಳಸುತ್ತಾರೆ. ಬಹುಶಃ ಬೀಸೋಕಲ್ಲಿನ ಬಗ್ಗೆ ನಮ್ಮ ಜನಪದರು ಹಾಡು ಕಟ್ಟಿದಷ್ಟು ಒರಳುಕಲ್ಲಿನ ಬಗ್ಗೆ ಇಲ್ಲವೆನ್ನಬಹುದು. ನೆರೆಮನೆಯವರಿಂದ ಬೀಸೋಕಲ್ಲು ತಂದು ರಾಗಿ, ಅಕ್ಕಿ, ನವಣೆ, ಜೋಳ ಇತ್ಯಾದಿ ಧಾನ್ಯಗಳ ಹಿಟ್ಟು ಮಾಡಿಕೊಂಡು ಅವರಿಗೆ ಅದನ್ನು ವಾಪಸ್ ಕೊಡುವಾಗ ಹೇಳುವ ಕೃತಜ್ಞತೆಯ ಹಾಡು, ಬೀಸುವಾಗ ಹೇಳಿಕೊಳ್ಳುವ ಹಾಡುಗಳು ಹೀಗೆ ಹಲವಾರು ಹಾಡುಗಳಿವೆ. ಹಿಂದಿನ ರಾಜರ ಆಡಳಿತದ ಕಾಲದಲ್ಲಿ ಯುದ್ಧ ತಯಾರಿಗಾಗಿ ಮದ್ದುಗುಂಡುಗಳನ್ನು ಅರೆಯಲು ಬೃಹತ್ತಾದ ಒರಳುಕಲ್ಲು, ಬೀಸೋಕಲ್ಲು ಇರುತ್ತಿದ್ದವಂತೆ! ಹಿಂದಿನ ಕಾಲದಲ್ಲಿ ಮುಟ್ಟಾದ ಹೆಂಗಳೆಯರು ಮೂರು ದಿನಗಳ ಕಾಲ ಮುಟ್ಟಿನ ಕೋಣೆಯಲ್ಲಿ ಪ್ರತ್ಯೇಕವಾಗಿ ಇರಬೇಕಾಗುತ್ತಿತ್ತು. ಆಗಲೂ ಅವರು ಸುಮ್ಮನೆ ಕೂರುವಂತಿರಲಿಲ್ಲ. ಅವರು ಭತ್ತವನ್ನು ಒರಳಿನಲ್ಲಿ ಹಾಕಿ ಒನಕೆಯಿಂದ ಕುಟ್ಟಿ ಅಕ್ಕಿ, ಅವಲಕ್ಕಿ ಮುಂತಾದವನ್ನು ಮಾಡಬೇಕಿತ್ತು.



ಒಮ್ಮೆ ನಮ್ಮೂರಿನ ಹತ್ತಿರದ ಹಳ್ಳಿಯಲ್ಲಿರುವ ಒಂದು ಮನೆಯಲ್ಲಿ ಹಿರಿಯ ಹೆಂಗಸೊಬ್ಬರು ದೈವಾಧೀನರಾದರು. ಹದಿನಾಲ್ಕನೇ ದಿನದ ಉತ್ತರಾದಿಕಾರ್ಯ ನಡೆಯುವಾಗ ಅವರ ಮನೆಯ ಅಡುಗೆಮನೆಯಲ್ಲಿ ಒರಳುಕಲ್ಲಿನ ಗುಂಡು ಇದ್ದಕ್ಕಿದ್ದ ಹಾಗೆ ಅರ್ಧ ಅಡಿ ಮೇಲೆ ಬಂದು ಮತ್ತೆ ಕೆಳಗಿಳಿಯಿತಂತೆ! ಸತ್ತಿರುವ ಹೆಂಗಸಿಗೆ ಆ ಒರಳುಕಲ್ಲು ಇಷ್ಟದ ವಸ್ತುವಾಗಿದ್ದು ಈಗಲೂ ಅದರ ಮೇಲಿನ ಮೋಹ ಹೋಗಿಲ್ಲ, ಹಾಗಾಗಿ ಒರಳುಕಲ್ಲಿನಲ್ಲಿ ಆಕೆಯ ಆತ್ಮ ಬಂದು ಸೇರಿಕೊಂಡಿತ್ತು ಎಂದು ಹಲವು ದಿನಗಳವರೆಗೆ ಸುದ್ದಿ ಹರಿದಾಡುತ್ತಿತ್ತು! ಖ್ಯಾತ ಅಂಕಣಕಾರರೊಬ್ಬರು, ವಿದೇಶದಲ್ಲಿರುವ ತಮ್ಮ ಸ್ನೇಹಿತರು ಹದಿನೈದು ಕೆ.ಜಿ. ತೂಕದ ಒರಳುಕಲ್ಲನ್ನು ವಿಮಾನದ ಮೂಲಕ ಸಾಗಿಸಿ, ವಿದೇಶದ ಮನೆಯಲ್ಲಿ ಅದಕ್ಕೆ ಗೃಹಪ್ರವೇಶ ಮಾಡಿಸಿ, ಈಗ ಪದಾರ್ಥಗಳನ್ನು ಅರೆಯಲು ಅದನ್ನೇ ಬಳಸುತ್ತಿರುವ ವಿಷಯವನ್ನು ಬ್ಲಾಗಿನಲ್ಲಿ ಸ್ವಾರಸ್ಯವಾಗಿ ಬರೆದುಕೊಂಡಿದ್ದಾರೆ!